| **ಸಂಗೀತಗಾರರು** | **ದಿನಾಂಕ ಮತ್ತು ಸಮಯ** | **ಮಧುರ ಶೀರ್ಷಿಕೆ** | **Profile** |
|---|---|---|---|
| ಸೂರ್ಯಗಾಯತ್ರಿ  **Darling of Online Rasikas** | 29-ಜನವರಿ-2020<br><br>ಸಂಜೆ 5:45 ಗೆ | ಶಾಸ್ತ್ರೀಯ ಭಜನೆಗಳು | **ಸೂರ್ಯಗಾಯತ್ರಿ** ತನ್ನ ಮಧುರ ಕಂಠದಿಂದ ಜಗತ್ತಿನಾದ್ಯಂತ ಸಂಗೀತ ಪ್ರಿಯರ ಹೃದಯಗಳನ್ನು ಸೆರೆಹಿಡಿದಿರುವರು. ಅವರು ಯೂಟ್ಯೂಬ್‌ನಲ್ಲಿ ಒಟ್ಟು 150+ ಮಿಲಿಯನ್ ಗಿಂತ ಹೆಚ್ಚಿನ ವೀಕ್ಷಕರನ್ನು ಹೊಂದಿದ್ದಾರೆ. |
| ಜಯಂತಿ ಕುಮರೇಶ್, ಕುಮರೇಶ್, ಪ್ರವೀಣ್ ಗೋಡ್ಖಿಂಡಿ  **Jayanthi: Highly acclaimed Veena player in India**<br>**Kumaresh: Fiddling Monk**<br>**Pravin: 1st Indian to represent Bansuri at the World Flute Music Festival** | 29-ಜನವರಿ-2020<br><br>ಸಂಜೆ 7:00 ಗೆ | ಮಧುರ ಸಮ್ಮಿಲನ | **ಜಯಂತಿ ಕುಮರೇಶ್**<br>ಜಯಂತಿ ಕುಮರೇಶ್ ಅವರು ಭಾರತದ ರಾಷ್ಟ್ರೀಯ ವಾದನವಾದ ಸರಸ್ವತಿ ವೀಣೆಯ ಪ್ರಮುಖ ಸಾಧಕರಾಗಿದ್ದಾರೆ. ಒಬ್ಬ ಕಲಾವಿದೆ, ಸಂಯೋಜಕಿ, ಸಂಶೋಧಕಿ ಮತ್ತು ಶಿಕ್ಷಣತಜ್ಞೆಯಾಗಿ ಭಾರತವು ಇದುವರೆಗೆ ನಿರ್ಮಿಸಿದ ವೀಣಾ ವಾದಕರಲ್ಲಿ ಅಗ್ರಗಣ್ಯರಾಗಿದ್ದಾರೆ.<br><br>**ಕುಮರೇಶ್**<br>ಕುಮರೇಶ್ ಕರ್ನಾಟಕ ಶಾಸ್ತ್ರೀಯ ಸಂಗೀತದ ದೀಪಕರಾಗಿ, ಅಗಾಧ ಬುದ್ಧಿಶಕ್ತಿಯ ಕಲಾವಿದರಾಗಿ, ಪಿಟೀಲು ಕಲಾಕುಶಲರಾಗಿ, ಸಂಯೋಜಕ, ರಚನೆಕಾರ, ಸಂಗೀತ ನಿರ್ದೇಶಕರಾಗಿ ಅವರು ಕಳೆದ 4 ದಶಕಗಳಿಂದ ತಮ್ಮ ಸಂಗೀತದ ಮೂಲಕ ಜನರನ್ನು ಕಲೆಯ ಮೇಲಿನ ಅಸಾಧಾರಣ ಪಾಂಡಿತ್ಯದಿಂದ ಆಕರ್ಷಿಸುತ್ತಿದ್ದಾರೆ. ಈ ಪ್ರಾಚೀನ ಕಲಾ ಪ್ರಕಾರವನ್ನು ಜಾಗತಿಕ ಪ್ರೇಕ್ಷಕರ ಬಳಿಗೆ ಕೊಂಡೊಯ್ಯುವ ಹೊಸ ಮಾರ್ಗಗಳನ್ನು ಅವರು ನಿರಂತರವಾಗಿ ಕಂಡುಕೊಳ್ಳುತ್ತಿದ್ದಾರೆ.<br><br>**ಪ್ರವೀಣ್ ಗೋಡ್ಖಿಂಡಿ**<br>ಪ್ರವೀಣ್ ಗೋಡ್ಖಿಂಡಿ ಸಾರಸಂಗ್ರಹಿ ಶಾಸ್ತ್ರೀಯ ಬನ್ಸೂರಿ ವಾದಕರಾಗಿದ್ದು, ಕರ್ನಾಟಕ ಲಯವನ್ನು ಅವರ ಸಂಗೀತಕ್ಕೆ ಅಳವಡಿಸುತ್ತಾ ಬನ್ಸೂರಿಯಲ್ಲಿ ಹಿಂದೂಸ್ಥಾನಿ ಸಂಗೀತವನ್ನು ಅಂತರರಾಷ್ಟ್ರೀಯ ಮಟ್ಟಕ್ಕೆ ಕೊಂಡೊಯ್ಯುತ್ತಿದ್ದಾರೆ. |

| | | | |
|---|---|---|---|
| **ಅಂಬಿ ಸುಬ್ರಮಣ್ಯಂ**<br><br>**The new star of Indian Classical Violin** | 30-ಜನವರಿ-2020<br><br>ಸಂಜೆ 5:00 ಗೆ | ಸಾಮಗಾನ ಧನ್ವಂತ್ರಿ ಸಂಗೀತ ಸರಣಿ<br><br>ಕೋಪವನ್ನು ನಿಗ್ರಹಿಸಲು ಮತ್ತು ನಿಯಂತ್ರಿಸಲು | **ಅಂಬಿ ಸುಬ್ರಮಣ್ಯಂ** ಪಿಟೀಲು ವಾದಕ, ಸಂಯೋಜಕ ಮತ್ತು ಶಿಕ್ಷಕ. ಅವರ ಗಮನ ಕರ್ನಾಟಕ ಪಿಟೀಲು ಮೇಲೆ ಇದ್ದರೂ, ಅಂಬಿ ಅವರು ಉತ್ತಮ ಹಾಡುಗಾರರು ಕೂಡ. ಸಂಗೀತವನ್ನು ಮುಖ್ಯವಾಹಿನಿಯ ಶೈಕ್ಷಣಿಕ ಪಠ್ಯಕ್ರಮಕ್ಕೆ ಸಂಯೋಜಿಸುವ ಉಪಕ್ರಮದಲ್ಲಿ ಅವರು ಕೆಲಸ ಮಾಡುತ್ತಾರೆ ಮತ್ತು ಭಾರತದಲ್ಲಿ 25,000 ಮಕ್ಕಳೊಂದಿಗೆ ಕೆಲಸ ಮಾಡುತ್ತಾರೆ. |
| **ಕೌಶಿಕಿ ಚಕ್ರಬೊರ್ತಿ**<br><br>**A celebrated singer of Hindustani Music** | 30-ಜನವರಿ-2020<br><br>ಸಂಜೆ 6:30ಕ್ಕೆ | ಸಮಯ ರಾಗ | **ಕೌಶಿಕಿ ಚಕ್ರಬೊರ್ತಿ** ಸಂಗೀತ ಪ್ರಯಾಣವು ತಾಯಿ ಚಂದನಾ ಚಕ್ರಬೊರ್ತಿ ಮತ್ತು ತಂದೆ ಅಜೋಯ್ ಚಕ್ರಬೊರ್ತಿಯವರ ಆಶ್ರಯದಲ್ಲಿ ಮನೆಯಲ್ಲೇ ಪ್ರಾರಂಭವಾಯಿತು.<br><br>ಅವರು ಖಯಾಲ್ ಮತ್ತು ತುಮ್ರಿ ನಿರೂಪಣೆಯಲ್ಲಿ ಪರಿಣತಿ ಅಲ್ಲದೆ ಮನೆಮಾತಾಗಿರುವ ಬಾಲಮುರಳಿಕೃಷ್ಣರಿಂದ ದಕ್ಷಿಣ ಭಾರತದ ಶಾಸ್ತ್ರೀಯ ಸಂಗೀತವನ್ನೂ ಕಲಿತಿದ್ದಾರೆ. |

| | | | |
|---|---|---|---|
| **ಆರ್ಯ ಅಂಬೇಕರ್**<br><br>**A young popular Marathi playback singer** | 31-ಜನವರಿ-2020<br><br>ಸಂಜೆ 5:00 ಗೆ | Sacred Roots-1<br>ಹಿಂದೂಸ್ಥಾನಿ ಶಾಸ್ತ್ರೀಯ ಭಕ್ತಿ ಸಂಗೀತ್ | **ಆರ್ಯ ಅಂಬೇಕರ್** ಮರಾಠಿ ಹಿನ್ನೆಲೆ ಗಾಯಕಿ ಮತ್ತು ಮಹಾರಾಷ್ಟ್ರದ ಪುಣೆಯ ನಟಿ. ಝೀ ಮರಾಠಿ ಚಾನೆಲ್‌ನ ಸ ರಿ ಗ ಮ ಪ ಮರಾಠಿ ಲಿಟ್ಲ್ ಚಾಂಪ್ಸ್‌ನಲ್ಲಿ ಭಾಗವಹಿಸಿ ಅಂತಿಮ ಘಟ್ಟ ತಲುಪಿದರು. ಆರ್ಯ ಅವರು 2017ರ ಜನವರಿಯಲ್ಲಿ 'ಟಿ ಸಾಧ್ಯಾ ಕೇ ಕಾರ್ತೆ' ಚಿತ್ರದ ಮೂಲಕ ತಮ್ಮ ನಟನೆಗೆ ಪಾದಾರ್ಪಣೆ ಮಾಡಿದ್ದಾರೆ. |
| **ಗಾಯತ್ರಿ ವೆಂಕಟರಾಘವನ್**<br><br>**A unique richest voice in Karnatic Music** | 31-ಜನವರಿ-2020<br><br>ಸಂಜೆ 6:30ಕ್ಕೆ | ತ್ಯಾಗರಾಜರ ಆರಾಧನೆ | **ಗಾಯತ್ರಿ ವೆಂಕಟರಾಘವನ್** ಆಕಾಶವಾಣಿಯ 'ಟಾಪ್' ದರ್ಜೆಯ ಮಾನ್ಯತೆ ಪಡೆದ ಕಲಾವಿದೆ. ಅವರು ಭಕ್ತಿ, ಭಾವ ತುಂಬಿದ ಸಂಗೀತಕ್ಕೆ ಹೆಸರುವಾಸಿಯಾಗಿದ್ದಾರೆ. ಸಂಗೀತವು ಉಪಾಸನೆ ಎಂದು ಬಲವಾಗಿ ನಂಬುತ್ತಾರೆ. ಇದು ಪ್ರದರ್ಶಕ ಮತ್ತು ಸಂಗೀತಗಾರ ಇಬ್ಬರಿಗೂ ಪೂಜಾ ವಿಧಾನವಾಗಿದೆ. |

| | | | |
|---|---|---|---|
| **ಸಂಗೀತ ಕಟ್ಟಿ**<br><br>**A leading Hindustani singer from Karnataka** | 31-ಜನವರಿ-2020<br><br>ಸಂಜೆ 7:45ಕ್ಕೆ | ಪುರಂದರದಾಸರ ಆರಾಧನೆ | **ಸಂಗೀತ ಕಟ್ಟಿ** ಹಿಂದೂಸ್ಥಾನಿ ಗಾಯನ ಜೊತೆಗೆ ಭಜನೆ, ವಚನಗಳು, ದಾಸವಾಣಿ, ಅಭಂಗ್ಸ್, ಭಾವಗೀತ್, ಜಾನಪದ ಸಂಗೀತ ಮತ್ತು ಪ್ಲೇಬ್ಯಾಕ್ ಗಾಯನದಲ್ಲಿ ಉತ್ತಮ ಅನುಭವವನ್ನು ಹೊಂದಿರುವರು. ಅವರ ಸುಮಧುರ ಸಂಯೋಜನೆಗಳು ಮತ್ತು ಆಲ್ಬಮ್ ಗಳಿಗಾಗಿ ಅವರು ಹಲವಾರು ಪ್ರಶಂಸನೀಯ ಪ್ರಶಸ್ತಿಗಳನ್ನು ಗೆದ್ದಿದ್ದಾರೆ. ಇವರು ಇಲ್ಲಿಯವರೆಗೆ 5000 + ಸಂಗೀತ ಕಛೇರಿಗಳನ್ನು ಅರ್ಪಿಸಿದ್ದು, ಅವರ ಮೊದಲ ಪ್ರದರ್ಶನವು ನಾಲ್ಕನೇ ವಯಸ್ಸಿನಲ್ಲಿ ನೀಡಿರುತ್ತಾರೆ. |
| **ಶೋಭನಾ ವಿಘ್ನೇಶ್**<br><br>**A popular Tamil playback singer** | 1-ಫೆಬ್ರವರಿ-2020<br><br>ಸಂಜೆ 5:00ಕ್ಕೆ | Sacred Roots -2<br>ಕರ್ನಾಟಕ ಶಾಸ್ತ್ರೀಯ ಭಕ್ತಿ ಸಂಗೀತ | **ಶೋಭನಾ ವಿಘ್ನೇಶ್** ಭಾರತದ ಪ್ರಮುಖ ಸಂಗೀತಗಾರರು ಮತ್ತು ಹಿನ್ನೆಲೆ ಗಾಯಕರು. ಅವರು 3 ವರ್ಷದವಳಿದ್ದಾಗ ಹಾಡುವಲ್ಲಿನ ಅವರ ಪ್ರತಿಭೆಯನ್ನು ಆಕೆಯ ಪೋಷಕರು ಗುರುತಿಸಿದರು. 1994 ರಲ್ಲಿ ಪ್ರಶಸ್ತಿ ಪುರಸ್ಕೃತ ಚಲನಚಿತ್ರ 'ಮಹಾನದಿ' ಯಲ್ಲಿ ಶೋಭನಾ ಬಾಲ ತಾರೆಯಾಗಿ ಕಾಣಿಸಿಕೊಂಡರು. ಆ ಚಿತ್ರದಲ್ಲಿ ಅವರು 'ಶ್ರೀ ರಂಗ ರಂಗ' ಹಾಡನ್ನು ಸಹ ಹಾಡಿದರು. ಅದು ಭಾರಿ ಯಶಸ್ಸನ್ನು ಗಳಿಸಿತು. ಆ ಚಿತ್ರದಲ್ಲಿ ಅವರ ಅದ್ಭುತ ಅಭಿನಯದಿಂದಾಗಿ ಅವರು ಅಂತರರಾಷ್ಟ್ರೀಯ ಮಟ್ಟದಲ್ಲಿ 'ಮಹಾನದಿ' ಶೋಭನಾ ಎಂದು ಪ್ರಸಿದ್ಧರಾಗಿದ್ದಾರೆ. |

| | | | |
|---|---|---|---|
| **ನೀಲಾದ್ರಿ ಕುಮಾರ್**<br><br>**The world's leading sitar maestro** | 1-ಫೆಬ್ರವರಿ-2020<br><br>ಸಂಜೆ 6:30ಕ್ಕೆ | Springtime Music | ಲೆಕ್ಕಿಸಬೇಕಾದ ಜಾಗತಿಕ ಐಕಾನ್, **ನೀಲಾದ್ರಿ ಕುಮಾರ್** ಅಸಾಂಪ್ರದಾಯಿಕ ಅಪರೂಪದ ವಾದ್ಯಗಾರ. ಸಿತಾರ್‌ನಲ್ಲಿ ನವೀನತೆಗೆ ಅನನ್ಯ ಸಂಗ್ರಹ ಮತ್ತು ಸಾಂಪ್ರದಾಯಿಕ ಮತ್ತು ಶಾಸ್ತ್ರೀಯ ಶೈಲಿಗಳ ಆಳವಾದ ತಿಳುವಳಿಕೆಯನ್ನು ಗೌರವಿಸುತ್ತ, ಅವರದೇ ಆದ ವಾದ್ಯ 'ಜಿಟಾರ್'ನಲ್ಲಿ ನಾವೀನ್ಯತೆ ಮೂಡಿಸುತ್ತ ಬಂದಿರುವರು. |
| **ರಂಜನಿ – ಗಾಯತ್ರಿ**<br><br>**The most popular and soughtafter Karnatic vocalists** | 2-ಫೆಬ್ರವರಿ-2020<br><br>ಸಂಜೆ 6:30ಕ್ಕೆ | Garland of Ragas | **ರಂಜನಿ ಮತ್ತು ಗಾಯತ್ರಿ** ಅವರು ಚಿಕ್ಕ ವಯಸ್ಸಿನಲ್ಲಿಯೇ ಕರ್ನಾಟಕ ಸಂಗೀತದ ಸೂಕ್ಷ್ಮ ವ್ಯತ್ಯಾಸಗಳನ್ನು ಗ್ರಹಿಸುವ ವಿಲಕ್ಷಣ ಸಾಮರ್ಥ್ಯವನ್ನು ತೋರಿಸಿದರು. ಶೃತಿಯ ಪರಿಪೂರ್ಣತೆ, ಶಕ್ತಿಯುತ ಧ್ವನಿ ನಿಯಂತ್ರಣ, ಶ್ರೀಮಂತ ಕಲ್ಪನೆ ಮತ್ತು ನಿಷ್ಪಾಪ ಸೌಂದರ್ಯಶಾಸ್ತ್ರವು ಸಹೋದರಿಯರ ಸಂಗೀತವನ್ನು ವಿವರಿಸುವ ಕೆಲವು ಗುಣಗಳಾಗಿವೆ. ಸ್ಪಂದನ ಮತ್ತು ಆಲೋಚನೆ, ಬುದ್ಧಿಶಕ್ತಿ ಮತ್ತು ಭಾವನೆ, ಸಂಪ್ರದಾಯ ಮತ್ತು ನಾವೀನ್ಯತೆಗಳ ನಡುವಿನ ಉತ್ತಮ ಸಮತೋಲನವನ್ನು ಕ್ರೋಢೀಕರಿಸಲು  ಅವರ ಎರಡು ಧ್ವನಿಗಳು ಮಿಶ್ರಣ ಮತ್ತು ವಿಭಿನ್ನತೆ ಹೊಂದಿದೆ. |

| | | |
|---|---|---|
| **ವಿಶ್ವ ಮೋಹನ್ ಭಟ್**<br><br>**A Classical Mohan Veena Virtuoso** | 10ನೇ ರಾಷ್ಟ್ರೀಯ ಸಾಮಗಾನ ಮಾತಂಗ ಪ್ರಶಸ್ತಿ ಪುರಸ್ಕೃತರು<br><br>ಪ್ರಶಸ್ತಿ ಸಮಾರಂಭ<br>2–ಫೆಬ್ರವರಿ–2020<br>ಸಂಜೆ 5:00 ಕ್ಕೆ | ಮೋಹನ್ ವೀಣೆಯ ಸೃಷ್ಟಿಕರ್ತ. **ವಿಶ್ವ ಮೋಹನ್ ಭಟ್** ಅವರ ಪ್ರಾಚೀನ ಶುದ್ಧ, ಸೂಕ್ಷ್ಮವಾದ ಮತ್ತು ಪ್ರಕಾಶಿಸುವ ಸಂಗೀತದಿಂದ ಜಗತ್ತನ್ನು ಮಂತ್ರಮುಗ್ಧಗೊಳಿಸಿದ್ದಾರೆ. ವಿಶ್ವ ಮೋಹನ್ ಅವರ ಮೊದಲ ಪ್ರಯತ್ನದಿಂದಾಗಿ ಅವರು ಗಿಟಾರ್ ಅನ್ನು ಮೋಹನ್ ವೀಣಾ ಎಂದು ಮರುನಾಮಕರಣ ಮಾಡಿದರಲ್ಲದೆ, ಅವರ ಪ್ರತಿಭೆಯ ಕಾರಣದಿಂದ ಇದನ್ನು ಭಾರತೀಯ ಶಾಸ್ತ್ರೀಯ ಸಂಗೀತದ ಮುಖ್ಯವಾಹಿನಿಯಲ್ಲಿ ಉನ್ನತ ಮಟ್ಟದಲ್ಲಿ ಸ್ಥಾಪಿಸಿದ ಹೆಗ್ಗಳಿಕೆ ಇವರದಾಗಿದೆ. ಅವರ ಕಲಾನೈಪುಣ್ಯತೆ, ವಾದನ ಚತುರತೆ, ಸಂಗೀತದ ಸ್ವಾರಸ್ಯಕರ ಸಂಗತಿಗಳ ಸಂಚಾರ, ಸುಂದರವಾಗಿ ಅವರ ಸ್ಪರ್ಶದಲ್ಲಿ ಸಂಪದ್ಭರಿತವಾಗಿ ಸಂಮಿಶ್ರಗೊಂಡು, 'ಬೋಲ್–ತಾನ'ಗಳಿಗೆ ವಿಶಿಷ್ಟ ಸ್ಥಾನ ದೊರಕಿಸಿದೆ. ತಂತ್ರಕಾರಿ ಹಾಗು ಗಾಯಕಿ ಅಂಗವನ್ನು ಪಾಶ್ಚಾತ್ಯ ವಾದನಕ್ಕೆ ಮೆರುಗು ಕೊಟ್ಟು, ಪ್ರಪಂಚದಾದ್ಯಂತ ಕೋಟ್ಯಾಂತರ ರಸಿಕರ ಮನವನ್ನು ಸೂರೆಗೊಂಡಿರುವರು. |